ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕ: 07.10.2023.

**ಮುಂದುವರೆದ ಮುಖ್ಯ ವಿಚಾರಣೆ: ಅರ್ಜಿದಾರ ಪರ ವಕೀಲರಿಂದ:**

ಇಂದು ನಾನು ಅರ್ಜಿಗೆ ಸಂಬಂಧಪಟ್ಟಂತೆ ಕೆಲವು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ, ಅವುಗಳನ್ನು ನನ್ನ ಪರವಾಗಿ ಪರಿಗಣಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

ನಾನು ದಿ: 04.05.2019 ರಂದು ಬೆಂಗಳೂರಿನ ಪೊಲೀಸ್ ಠಾಣೆಯಲ್ಲಿ ನೀಡಿದ ದೂರಿನ ಪ್ರತಿಯನ್ನು ನಿಪಿ-2 ಎಂದು, ದಿ: 06.05.2019 ರಂದು ಸಹಾಯವಾಣಿಗೆ ನೀಡಿದ ಮೂರು ಪ್ರತಿಗಳನ್ನು ಕ್ರಮವಾಗಿ ನಿಪಿ-3 ರಿಂದ ನಿಪಿ-5 ಎಂದು, ಅದೇ ರೀತಿ ದಿ: 06.07.2019 ರಂದು ಎರಡು ಪ್ರತಿಗಳನ್ನು ಕ್ರಮವಾಗಿ ನಿಪಿ-6 ಮತ್ತು ನಿಪಿ-7 ಎಂದು, ನಿವೇಶನ ಪಡೆದುಕೊಳ್ಳುವ ಸಲುವಾಗಿ ಸಾಲ ತೆಗೆದುಕೊಂಡಿದ್ದರ ಬಗ್ಗೆ ಎಲ್ಐಸಿ ರವರು ನೀಡಿದ ಪತ್ರವನ್ನು ನಿಪಿ-8 ಎಂದು, ಐಸಿಐಸಿಐ ಬ್ಯಾಂಕಿನವರು ನೀಡಿದ ದಿ: 01.01.2015 ರಿಂದ ದಿ: 31.12.2015 ರವರೆಗೆ ಇರುವ ಸ್ಟೇಟ್‌ಮೆಂಟ್‌ನ್ನು ನಿಪಿ-9 ಎಂದು, ದಿ: 01.01.2016 ರಿಂದ ದಿ: 31.12.2016 ರವರೆಗೆ ಇರುವ ಸ್ಟೇಟ್‌ಮೆಂಟ್‌ನ್ನು ನಿಪಿ-10 ಎಂದು, ದಿ: 01.01.2017 ರಿಂದ ದಿ: 31.12.2017 ರವರೆಗೆ ಇರುವ ಸ್ಟೇಟ್‌ಮೆಂಟ್‌ನ್ನು ನಿಪಿ-11 ಎಂದು, ದಿ: 01.01.2018 ರಿಂದ ದಿ: 31.12.2018 ರವರೆಗೆ ಇರುವ ಸ್ಟೇಟ್‌ಮೆಂಟ್‌ನ್ನು ನಿಪಿ-12 ಎಂದು, ದಿ: 01.01.2019 ರಿಂದ ದಿ: 31.12.2019 ರವರೆಗೆ ಇರುವ ಸ್ಟೇಟ್‌ಮೆಂಟ್‌ನ್ನು ನಿಪಿ-13 ಎಂದು, ದಿ: ದಿ: 01.12.2017 ರಿಂದ ದಿ:

14.03.2018 ರವರೆಗೆ ಇರುವ ಸ್ಟಾಂಡರ್ಡ ಚಾರ್ಟಡ್ ಬ್ಯಾಂಕಿನರು ನೀಡಿದ ಸ್ಟೇಟ್‌ಮೆಂಟ್‌ನ್ನು ನಿಪಿ-14 ಎಂದು, ದಿಃ 31.03.2018 ರಿಂದ ದಿಃ 31.05.2023 ರವರೆಗೆ ಇರುವ ಸ್ಟಾಂಡರ್ಡ್ ಚಾರ್ಟಡ್ ಬ್ಯಾಂಕಿನವರು ನೀಡಿದ ಸ್ಟೇಟ್‌ಮೆಂಟ್ ಪ್ರತಿಯನ್ನು ನಿಪಿ-15 ಎಂದು ಗುರುತಿಸಲಾಯಿತು.

ಆದ್ದರಿಂದ ನಾನು ನನ್ನ ಅರ್ಜಿಯಲ್ಲಿ ಕೇಳಿದಂತೆ ಆದೇಶ ಮಾಡಬೇಕೆಂದು ಮಾನ್ಯ ನ್ಯಾಯಾಲಯಕ್ಕೆ ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ** ಎದುರುದಾರ ಪರ ವಕೀಲರಿಂದಃ

(ಈ ಹಂತದಲ್ಲಿ ಎದುರುದಾರ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**